ಅಧ್ಯಕ್ಷರು: ಆಯಿತು, ದಯಮಾಡಿ ತಾವು ತಮ್ಮ ಸ್ಥಾನಕ್ಕೆ ಹೋಗಿ. ಈಗ ಮಾನ್ಯ ಪಾಟೀಲ್‌ರು ಕೇಳಿ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ತಮ್ಮ ಸ್ಥಾನಕ್ಕೆ ತೆರಳಿದರು)

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಉನ್ನತ ಶಿಕ್ಷಣ ಸಚಿವರನ್ನು 574ನೇ ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಅಲ್ಲ ಮಾನ್ಯ ಮುಖ್ಯಮಂತ್ರಿಗಳು ಇರಲಿ, ತಾವಾದರೂ ಬರಬೇಡವೆ?

ಅಧ್ಯಕ್ಷರು: ಇರಲಿ, ಇರಲಿ. ಪಾಟೀಲರು ನಿಂತುಬಿಟ್ಟಿದ್ದಾರೆ, ಅವರು ಯೀಲ್ಡ್ ಆಗಿಲ್ಲ.

ಶ್ರೀ ವಾಟಾಳ್ ನಾಗರಾಜ್: ತಾವು ಬರಲಿಲ್ಲ, ನೀವು ಬರುತ್ತೀರಿ ಎಂದು ಹೇಳಿದ್ದೀರಿ ತಾನೆ? ಹಾರ ತುರಾಯ ಇಟ್ಟುಕೊಂಡಿದ್ದೇವು, ತಾವು ಬರಲಿಲ್ಲ. ಏನಿದು ಪರಿಸ್ಥಿತಿ?

ಅಧ್ಯಕ್ಷರು: ಆಯಿತು, ನಮ್ಮದೇನಿದೆ? ಎಸ್.ಎಸ್. ಪಾಟೀಲ್ ಕೇಳಿ.

ಗದಗ ಜಿಲ್ಲೆ ಮುಂಡರಗಿಯಲ್ಲಿ ಸರ್ಕಾರದ ಪದವಿ ಕಾಲೇಜು ಪ್ರಾರಂಭಿಸುವ ಬಗ್ಗೆ

160 (574) ಶ್ರೀ ಪಾಟೀಲ್ ಎಸ್.ಎಸ್. (ಮುಂಡರಗಿ): ಮಾನ್ಯ ಉನ್ನತ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

(ಅ) ಗದಗ ಜಿಲ್ಲೆ ಮುಂಡರಗಿಯಲ್ಲಿ ಸರ್ಕಾರಿ ಪದವಿ ಕಾಲೇಜು ಎಂದಿನಿಂದ ಪ್ರಾರಂಭವಾಗಿದೆ ;

(ಆ) ಈ ಕಾಲೇಜಿನಲ್ಲಿ ಬೋಧಕ ಹಾಗೂ ಬೋಧಕೇತರ ಹುದ್ದೆಗಳು ಖಾಲಿ ಇರುವ ವಿವರ ನೀಡುವುದು ;

(ಇ) ಖಾಲಿ ಇರುವ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಡಿ.ಹೆಚ್. ಶಂಕರಮೂರ್ತಿ (ಮಾನ್ಯ ಉನ್ನತ ಶಿಕ್ಷಣ ಸಚಿವರು):

(ಅ) ದಿನಾಂಕ: 06-09-2003ರಂದು ಮುಂಡರಗಿಯಲ್ಲಿ ಸರ್ಕಾರಿ ಪದವಿ ಕಾಲೇಜು ಪ್ರಾರಂಭವಾಗಿದೆ.

(ಆ) ಸರ್ಕಾರಿ ಆದೇಶ ಸಂಖ್ಯೆ: ಇಡಿ 55 ಯುಎನ್‌ಇ 2003 ದಿನಾಂಕ: 6-9-2003ರನ್ವಯ ಬಿ.ಎ., ಬಿ.ಕಾಂ ತರಗತಿಗಳನ್ನು ಪ್ರಾರಂಭಿಸಲಾಗಿದೆ. ಆ ಪ್ರಕಾರ

1) ಗ್ರೇಡ್-1 ಪ್ರಾಂಶುಪಾಲರ ಒಂದು ಹುದ್ದೆ
2) ಉಪನ್ಯಾಸಕರುಗಳ ತಲಾ ಒಂದೊಂದು ಹುದ್ದೆಗಳು
3) ಗ್ರಂಥಪಾಲಕರು ಒಂದು ಹುದ್ದೆ
4) ದೈಹಿಕ ಶಿಕ್ಷಣ ಬೋದಕರ ಒಂದು ಹುದ್ದೆ

ಬೋಧಕೇತರ ವೃಂದದಲ್ಲಿ

ಸೂಪರಿಂಟೆಂಡೆಂಟ್, ಪ್ರ.ದ.ಸ., ದ್ವಿ.ದ.ಸ., ಗ್ರಂಥಾಲಯ ಸಹಾಯಕ, ಬೆರಳಚ್ಚುಗಾರ, ಅಟೆಂಡರ್, ಜವಾನ, ವಾಚ್‌ಮನ್ ಮತ್ತು ಸ್ವೀಪರ್ ತಲಾ ಒಂದು ಹುದ್ದೆಗಳನ್ನು ಭರ್ತಿ ಮಾಡಬೇಕಾಗುತ್ತದೆ.

(ಇ) ಕಾಲೇಜು ಶಿಕ್ಷಣ ಇಲಾಖೆಯಲ್ಲಿ ವಿವಿಧ ವಿಷಯಗಳಲ್ಲಿ ಖಾಲಿ ಇರುವ ಒಟ್ಟು 213 ಖಾಲಿ ಇರುವ ಉಪನ್ಯಾಸಕರುಗಳನ್ನು ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಕರ್ನಾಟಕ ಲೋಕ ಸೇವಾ ಆಯೋಗವನ್ನು ಕೋರಲಾಗಿತ್ತು. ಇದೀಗ ಆಯೋಗದಿಂದ ಅಭ್ಯರ್ಥಿಗಳ ಪಟ್ಟಿ ಬಂದಿರುತ್ತದೆ. ಗುಣ ನಡತೆ ಬಗ್ಗೆ ಪೋಲಿಸ್ ವರದಿ, ಮೀಸಲಾತಿ ಬಗ್ಗೆ ಸಿಂಧುತ್ವ ಪ್ರಮಾಣ ಪತ್ರ ಮತ್ತು ದೇಹಧಾರ್ಡ್ಯತೆ ಬಗ್ಗೆ ಆರೋಗ್ಯ ಇಲಾಖೆಯಿಂದ ದೃಢೀಕರಣ ಪತ್ರ ಇವುಗಳನ್ನು ಪಡೆಯಲಾಗಿರುತ್ತದೆ. ಇವರುಗಳಿಗೆ ನೇಮಕಾತಿ ಆದೇಶ ನೀಡುವ ಪ್ರಕ್ರಿಯೆ ಕ್ಷಿಪ್ರಗತಿಯಲ್ಲಿದ್ದು, ಮುಂಡರಗಿ ಕಾಲೇಜಿನಲ್ಲಿರುವ ಉಪನ್ಯಾಸಕರುಗಳ ಹುದ್ದೆಗಳೂ ಒಳಗೊಂಡಂತೆ ಶೀಘ್ರ ಭರ್ತಿ ಮಾಡಲಾಗುತ್ತದೆ.

ಬೋಧಕೇತರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ಕುರಿತು ಆರ್ಥಿಕ ಇಲಾಖೆಯ ಸಹಮತಿ ಕೇಳಲಾಗಿದ್ದು, ಆರ್ಥಿಕ ಇಲಾಖೆಯ ಸಹಮತಿ ಕೇಳಲಾಗಿದ್ದು, ಆರ್ಥಿಕ ಇಲಾಖೆ ಸಹಮತಿ ದೊರಕಿದ ಕೂಡಲೇ ಬೋಧಕೇತರ ಹುದ್ದೆಗಳನ್ನೂ ಸಹ ಶೀಘ್ರದಲ್ಲಿ ಭರ್ತಿ ಮಾಡಲಾಗುತ್ತದೆ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಅಧಿಕಾರಿಗಳು ಹೇಗೆ ನೋಡುತ್ತಾರೋ ಏನೋ ನನಗೆ ವಿಚಿತ್ರವೆನಿಸುತ್ತದೆ. ಅಲ್ಲಿ ಸೈನ್ಸ್ ಕಾಲೇಜು ಪ್ರಾರಂಭವಾಗಿರುವುದು. ಆದರೆ ತಾವು ಉತ್ತರ ಕೊಟ್ಟಿರುವುದು ಆರ್ಟ್ಸ್ ಕಾಲೇಜು ಎಂದು. ಆ ಸೈನ್ಸ್ ಕಾಲೇಜಿನಲ್ಲಿ ಒಂದು ಡಿವಿಜನ್ ಪ್ರಾರಂಭ ಮಾಡುವುದಕ್ಕೆ ತೆಗೆದುಕೊಂಡಿದ್ದರು, ಅದನ್ನೆ ಉತ್ತರ ಕೊಟ್ಟು, ಸೈನ್ಸ್ ಕಾಲೇಜು ಎಂದು ಪ್ರಾರಂಭವಾಗಿದೆ ಅಂದಿನಿಂದ ಒಬ್ಬರು ಸೈನ್ಸ್ ಲೆಕ್ಚರರ್ ಅನ್ನು ಅಲ್ಲಿಗೆ ಹಾಕಿಲ್ಲ. ಅಲ್ಲಿ ಯಾರನ್ನೋ ಒಬ್ಬರನ್ನು ಆರ್ಟ್ಸ್ ಲೆಕ್ಚರರ್‌ರವರನ್ನು ಹಾಕಿಬಿಟ್ಟರು, ಆ ಮನುಷ್ಯ ಸೈನ್ಸ್ ಸ್ಟೂಡೆಂಟ್ಸ್‌ಗೆ ಲೆಕ್ಚರರ್ ಇಲ್ಲ, ಹೋಗಿ ಎಂದು ಹೇಳಿ ಕಳುಹಿಸುತ್ತಿದ್ದಾರೆ. ದಯವಿಟ್ಟು ಅಲ್ಲಿರುವಂತಹ ಪ್ರಿನ್ಸಿಪಾಲ್‌ರವರನ್ನು ಈ ಕೂಡಲೇ ತೆಗೆಯಬೇಕು. ಅಲ್ಲಿಗೆ ಬೇರೆಯವರನ್ನು ಹಾಕಿ, ದಯಮಾಡಿ. ಆದರೆ ಅಲ್ಲಿ ಪ್ರಾರಂಭವಾಗಿರುವುದು ಸೈನ್ಸ್ ಕಾಲೇಜು, ನಮಗೆ ಬೇಕಾಗಿರುವುದು ಸೈನ್ಸ್. ಅಲ್ಲಿ ಒಂದು ಈಗಾಗಲೇ ಪ್ರೈವೇಟ್ ಆರ್ಟ್ಸ್ ಕಾಲೇಜು ಇದೆ. ಅದರೆ ಅಲ್ಲಿ ಏಡೆಡ್ ಕಾಲೇಜು ಎಂದು ಹೇಳಿ ಡೊನೇಷನ್ ತೆಗೆದುಕೊಳ್ಳುತ್ತಿದ್ದಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳಿ. ಆದುದರಿಂದ ಈ ಕಾಲೇಜಿಗೆ ಸೈನ್ಸ್ lecturers ಅನ್ನು ಎಷ್ಟು ದಿವಸದಲ್ಲಿ ಹಾಕುತ್ತೀರಿ? ಯಾವಾಗ ಹಾಕುತ್ತೀರಿ? ಮತ್ತು ಅಲ್ಲಿ ಬಿಬಿಎಂ ಕೋರ್ಸ್ ಇದೆ. ಅದರೆ

ಲೆಕ್ಚರೆರ್ಸ್ ಇಲ್ಲವೆಂದು ಹೇಳಿ ಹಾಗೆ ಕಳುಹಿಸಿದ್ದಾರೆ ಮತ್ತು ಈ ತಪ್ಪು ಯಾವ ಅಧಿಕಾರಿಗಳು ಕೊಟ್ಟಿದ್ದಾರೆ ಇವರ ಮೇಲೆ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಡಿ.ಹೆಚ್. ಶಂಕರಮೂರ್ತಿ: ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರಾದ ಶ್ರೀ ಎಸ್.ಎಸ್. ಪಾಟೀಲ್‌ರವರ ಪ್ರಶ್ನೆ ಸರಿಯಾಗಿದೆ. ಅಲ್ಲಿ ಸೈನ್ಸ್ ಕಾಲೇಜ್ ಇರುವಂಥಾದ್ದು; ಆರ್ಟ್ಸ್‌ನ ಸಮಸ್ಯೆ ಕೂಡ ಇದೆ. ಅದು ಇರಲಿ, ಈಗ ಮಾನ್ಯ ಸದಸ್ಯರು, ಹಾಲಿ ಇರುವುಂಥ ಹುದ್ದೆಯನ್ನು ಭರ್ತಿ ಮಾಡಬೇಕು, ಲೆಕ್ಚರರ್ಸ್ ಅನ್ನು ಕೊಡಬೇಕೆಂದು ಕೇಳಿದ್ದಾರೆ. ಈಗ ಸದ್ಯದಲ್ಲೇ ನಮ್ಮ ಇಲಾಖೆಯಿಂದ ಲೆಕ್ಚರರ್ಸ್ ಅನ್ನು ಭರ್ತಿ ಮಾಡಿಸುತ್ತಿದ್ದೇನೆ. ಈ ಲೆಕ್ಚರರ್ಸ್ ಅನ್ನು ತೆಗೆದುಕೊಂಡ ನಂತರ ಆದ್ಯತೆಯ ಮೇಲೆ ಮುಂಡರಗಿ ತಾಲ್ಲೂಕಿನ ಕಾಲೇಜಿಗೆ ಬೋಧಕ ಸಿಬ್ಬಂದಿಯನ್ನು ನಾನು ಪೋಸ್ಟ್ ಮಾಡಿಸಿ ಕೊಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ನಾನು ಏಕೆ ಹೇಳುತ್ತೇನೆಂದರೆ ಅಲ್ಲಿ ಖಾಲಿ ಹುದ್ದೆ ಆರ್ಟ್ಸ್ ಎಂದು ತೋರಿಸುತ್ತಾರೆ, ಸೈನ್ಸ್ ಹುದ್ದೆ ಖಾಲಿ ಎಂದು ಇವರು ತೋರಿಸುವುದಿಲ್ಲ. ನೀವು ನಿಮ್ಮ ತಾಲ್ಲೂಕಿಗೆ ಹುದ್ದೆಯನ್ನು ಭರ್ತಿ ಮಾಡುವಾಗ, ನಿಮಗೆ ಎಲ್ಲವೂ ನೆನಪು ಇರುವುದಿಲ್ಲ. ಇಲ್ಲಿ ಆರ್ಟ್ಸ್‌ನಲ್ಲಿ ಲೆಕ್ಚರರ್ ಹುದ್ದೆ ಖಾಲಿ ಎಂದು ತೋರಿಸಿದ್ದಾರೆ. ಇಲ್ಲಿ ಸೈನ್ಸ್‌ನಲ್ಲಿ ಹುದ್ದೆ ತುಂಬಬೇಕೆಂದು ತೋರಿಸಿಲ್ಲ. ಇಲ್ಲಿ ನನ್ನ ಪ್ರಶ್ನೆ ಇರುವಂಥಾದ್ದು ಇದು. ಅಲ್ಲಿ ಸೈನ್ಸ್ ಕಾಲೇಜು ಇದೆಯೆಂದು ಉತ್ತರವೇ ಇಲ್ಲ.

ಶ್ರೀ ಡಿ.ಹೆಚ್. ಶಂಕರಮೂರ್ತಿ: ನಾನು ಸೈನ್ಸ್ ಟೀಚರ್ ಅನ್ನೇ ಕೊಡುತ್ತೇನೆ. ಅಲ್ಲಿ ಯಾವ್ಯಾವುದು ಹುದ್ದೆಗಳು ಖಾಲಿ ಇದೆಯೋ ಅದೆಲ್ಲವನ್ನೂ ಕೊಡುತ್ತೇನೆ. ನಿಮ್ಮ ಕಾಲೇಜಿಗೆ ಆದ್ಯತೆಯ ಮೇಲೆ ಕೊಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್: ಅಲ್ಲಿ ಇರುವ ಪ್ರಿನ್ಸಿಪಾಲರನ್ನು ಇಮ್ಮೀಡಿಯೇಟ್ ಆಗಿ ಟ್ರಾನ್ಸ್‌ಫರ್ ಮಾಡಿ.

ಶ್ರೀ ಹೆಚ್. ನಿಂಗಪ್ಪ: ಮಾನ್ಯ ಅಧ್ಯಕ್ಷರೆ, ಬಹಳಷ್ಟು ಕಾಲೇಜ್‌ಗಳಲ್ಲಿ ಅಧ್ಯಾಪಕರುಗಳು ಇಲ್ಲ. ನಮ್ಮ ಕುಣಿಗಲ್ ತಾಲ್ಲೂಕಿನಲ್ಲಿ ಪ್ರಾಧ್ಯಾಪಕರು ಇಲ್ಲ.

ಅಧ್ಯಕ್ಷರು: ಆಯಿತು, ಅದನ್ನು ಸ್ಪೆಸಿಫಿಕ್ ಆಗಿ ಕೇಳಿದ್ದಾರೆ.

ಶ್ರೀ ಹೆಚ್. ನಿಂಗಪ್ಪ: ನಾನು ಇದನ್ನು ಮಾನ್ಯ ಮಂತ್ರಿಯವರ ಗಮನಕ್ಕೆ ತರುತ್ತಿದ್ದೇನೆ.

ತೀರ್ಥಹಳ್ಳಿ ತಾಲ್ಲೂಕಿನ ಏತ ನೀರಾವರಿ ಯೋಜನೆಗಳು

156 (855) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?